ನಾನಂತೂ ಕಿರುತೆರೆ ಮತ್ತು ಸಿನಿಮಾ ಎರಡರಲ್ಲಿಯೂ ಮುಂದುವರಿಯುತ್ತೇನೆ. ಒಳ್ಳೆಯ ಪಾತ್ರಗಳು ಎಲ್ಲಿ ಸಿಕ್ಕರೂ ನಟಿಸುತ್ತೇನೆ' ಎಂದು ಆತ್ಮವಿಶ್ವಾಸದಿಂದಲೇ ಹೇಳುತ್ತಾರೆ.

'ಬಹುಕೃತ ವೇಷಂ' ಸಿನಿಮಾದ ಪಾತ್ರದ ಕುರಿತು ಅವರಿಗೆ ಸಾಕಷ್ಟು ನಿರೀಕ್ಷೆಗಳಿವೆ. 'ಈ ಸಿನಿಮಾದಲ್ಲಿ ನನ್ನ ಪಾತ್ರಕ್ಕೆ ನಟನೆಯ ಅವಕಾಶಗಳು ಸಾಕಷ್ಟಿವೆ. ಯಾವುದೇ ಕಲಾವಿದನಾದರೂ ಖುಷಿಪಟ್ಟು ನಟಿಸುವಂಥ ಪಾತ್ರವದು. ಸಿಟ್ಟು, ಪ್ರೀತಿ, ಅಳು, ನಗು ಎಲ್ಲವೂ ತುಸು ಅತಿಯಾಗಿಯೇ ಇರುವ ಹುಡುಗಿ ಅವಳು. ಮೊದಲ ಅವಕಾಶದಲ್ಲಿ ಇಂಥ ಪಾತ್ರ ಸಿಕ್ಕಿದ್ದು ತೃಪ್ತಿ ನೀಡಿದೆ' ಎನ್ನುವ ಅವರು ಕಿರುತೆರೆಗೆ ವಾಪಸಾಗಲೂ ಸಿದ್ಧತೆ ನಡೆಸಿದ್ದಾರೆ.

'ಏಪ್ರಿಲ್‌ನಲ್ಲಿ ನನ್ನ ಇನ್ನೊಂದು ಸಿನಿಮಾ ಸೆಟ್ಟೇರುತ್ತಿದೆ. ಹಾಗೆಯೇ ಒಂದು ಧಾರಾವಾಹಿಯಲ್ಲಿಯೂ ನಟಿಸುವ ಸಿದ್ಧತೆಯಲ್ಲಿದ್ದೇನೆ' ಎಂದು ಮಾಹಿತಿ ನೀಡುವ ಅವರು ಈ ಎರಡೂ ಪ್ರಾಜೆಕ್ಟ್‌ಗಳ ಬಗ್ಗೆಯೂ ಹೆಚ್ಚಿನ ಮಾಹಿತಿ ಬಿಟ್ಟುಕೊಡುವುದಿಲ್ಲ.

'ಮತ್ತೆ ಖಳಪಾತ್ರದ ಮೂಲಕವೇ ವಾಪಸ್ಸಾಗುತ್ತೀರಾ?' ಎಂದು ಕೆದಕಿದರೆ, 'ಹಾಗೆ ಅಂದುಕೊಳ್ಳಬೇಡಿ. ಒಳ್ಳೆಯ ಪಾತ್ರದ ಮೂಲಕ, ಒಳ್ಳೆಯ ವಾಹಿನಿಯಲ್ಲಿ, ಒಳ್ಳೆಯ ಸ್ಲಾಟ್‌ನಲ್ಲಿಯೇ ವಾಪಸ್ಸಾಗುತ್ತೇನೆ' ಎಂದು ನಗುತ್ತಾರೆ ವೈಷ್ಣವಿ.

ನಟನೆಯ ಹೊರತಾಗಿ ಅವರಿಗೆ ತುಂಬ ಖುಷಿ ಕೊಡುವುದು ಡಾನ್ಸ್. ಹಾಗೆಯೇ ಮನಸ್ಸಿಗೆ ಸಮಾಧಾನ ಕೊಡುವುದು ಪುಸ್ತಕಗಳ ಓದು. ವ್ಯಕ್ತಿತ್ವ ವಿಕಸನ ಮತ್ತು ಅಧ್ಯಾತ್ಮಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಹೆಚ್ಚಾಗಿ ಓದುವ ವೈಷ್ಣವಿ ಇತ್ತೀಚೆಗೆ ಓದಿ ಇಷ್ಟಪಟ್ಟಿರುವ ಪುಸ್ತಕ, 'ಆಟೊಬಯೋಗ್ರಫಿ ಆಫ್ ಎ ಯೋಗಿ'.

ನಟನೆಯ ಜೊತೆಗೆ ಸಿನಿಮಾದ ಇತರ ವಿಭಾಗಗಳಲ್ಲಿಯೂ ಕೆಲಸ ಮಾಡುವ ಆಸಕ್ತಿ ಅವರಿಗಿದೆ. 'ನಟಿಯಾಗುತ್ತೇನೆ ಅಂದುಕೊಂಡಿರಲಿಲ್ಲ, ಆದೆ. ಹಾಗೆಯೇ ನಿರ್ದೇಶನವನ್ನೂ ಮಾಡುವ ಆಸೆ ಇದೆ, ಅವಕಾಶ ಬರಬಹುದು' ಎಂದು ಮುಗುಳ್ನಗುವ ವೈಷ್ಣವಿ, ಎಲ್ಲದರಿಂದ ಒಂದೊಂದು ಪಾಠ ಕಲಿತು ನಟನೆಯ ಪರ್ವತ ಏರುವ ಮಹತ್ವಾಕಾಂಕ್ಷೆ ಇಟ್ಟುಕೊಂಡಿದ್ದಾರೆ. ■

# ಶ್ರದ್ಧಾ ಎಲ್ಲಿದ್ದಾರೆ?

ಶ್ರದ್ಧಾ ಶ್ರೀನಾಥ್ ಏನು ಮಾಡುತ್ತಿದ್ದಾರೆ? ಈ ಪ್ರಶ್ನೆ ಚಿತ್ರರಂಗದವರನ್ನು ಎಷ್ಟು ಕಾಡಿದೆಯೋ ಇಲ್ಲವೋ, ಶ್ರದ್ಧಾ ಅಭಿಮಾನಿಗಳನ್ನಂತೂ ಹಲವು ದಿನಗಳಿಂದ ಕಾಡುತ್ತಲೇ ಇದೆ. ಅದಕ್ಕೆ ಕಾರಣವೂ ಇಲ್ಲದಿಲ್ಲ. ಕನ್ನಡದ ಉಳಿದೆಲ್ಲ ನಟಿಯರು ಕಳೆದ ಎರಡು ವರ್ಷಗಳಲ್ಲಿ ಉಳಿಕೆಯಾಗಿದ್ದ ಸಾಲು ಸಾಲು ಸಿನಿಮಾಗಳನ್ನು ಮುಗಿಸುವ ಧಾವಂತದಲ್ಲಿದ್ದರೆ, ಶ್ರದ್ಧಾ ಮಾತ್ರ ಎಲ್ಲಿಯೂ ಕಾಣಿಸಿಕೊಳ್ಳುತ್ತಿಲ್ಲ. 2020ರಲ್ಲಿ ಕೊರೊನಾ ಹಾವಳಿ ಶುರುವಾಗುವ ವೇಳೆಯಲ್ಲಿ ಶ್ರದ್ಧಾ ಕೈಯಲ್ಲಿ ಒಂದಿಷ್ಟು ಸಿನಿಮಾಗಳಿದ್ದವು. 'ಗೋದ್ರಾ' ಸಿನಿಮಾ ಚಿತ್ರೀಕರಣ ಮುಗಿದ ಸುದ್ದಿಯನ್ನು ಅವರೇ ಸೋಷಿಯಲ್ ಮೀಡಿಯಾಗಳಲ್ಲಿ ಹಂಚಿಕೊಂಡಿದ್ದರು. ರಿಷಭ್ ಶೆಟ್ಟಿ ಅವರ 'ರುದ್ರ ಪ್ರಯಾಗ'ಕ್ಕೆ ಸಹಿ ಹಾಕಿದ್ದರು. ಆದರೆ ರಿಷಬ್ ಈಗ 'ಕಾಂತಾರ' ಸಿನಿಮಾ ಕೆಲಸದಲ್ಲಿರುವುದರಿಂದ 'ರುದ್ರ ಪ್ರಯಾಗ'ದ ಕೆಲಸಗಳೂ ನಡೆಯುತ್ತಿಲ್ಲ. ವಿಕ್ರಾಂತ್ ರೋಣ ಸಿನಿಮಾದಲ್ಲಿಯೂ ಶ್ರದ್ಧಾ ಕಾಣಿಸಿಕೊಳ್ಳುತ್ತಾರೆ ಎಂಬ ಸುದ್ದಿಯಿದೆ. ಆ ಸಿನಿಮಾವೂ ಬಿಡುಗಡೆಯ ದಿನಗಳನ್ನು ಎದುರು ನೋಡುತ್ತಿದೆ.

ಕನ್ನಡ ಸಿನಿಮಾಗಳ ಕಥೆ ಇಷ್ಟಾದರೆ, ಮಲಯಾಳಂ ಭಾಷೆ 'ಆರಟ್ಟು' ಎಂಬ ಸಿನಿಮಾದಲ್ಲಿಯೂ ಶ್ರದ್ಧಾ ನಟಿಸುತ್ತಿದ್ದಾರೆ. ತಮಿಳು ಮತ್ತು ತೆಲುಗು ಎರಡೂ ಭಾಷೆಗಳಲ್ಲಿ ತಯಾರಾಗುತ್ತಿರುವ 'ಕಲಿಯುಗಂ' ಅವರು ಒಪ್ಪಿಕೊಂಡಿರುವ ಇನ್ನೊಂದು ಸಿನಿಮಾ. ಇದನ್ನು ಬಿಟ್ಟರೆ ಇನ್ನೊಂದು ತಮಿಳು ಸಿನಿಮಾಗೂ ಅವರು ಸಹಿ ಹಾಕಿರುವ ಸುದ್ದಿಯಿದೆ. ಈ ಎಲ್ಲ ಸಿನಿಮಾಗಳು ಯಾವ ಹಂತದಲ್ಲಿವೆಯೋ ಗೊತ್ತಿಲ್ಲ.

2020ರಿಂದ ಈಚೆಗೆ ಶ್ರದ್ಧಾ ಯಾವ ಕನ್ನಡ ಸಿನಿಮಾವನ್ನೂ ಒಪ್ಪಿಕೊಂಡ ಮಾಹಿತಿ ಇಲ್ಲ. ಹಾಗಾಗಿ ಒಂದು ಬ್ರೇಕ್ ತೆಗೆದುಕೊಳ್ಳಲು ನಿರ್ಧರಿಸಿದ್ದಾರೆಯೇ? ಅಥವಾ ಈಗ ಒಪ್ಪಿಕೊಂಡಿರುವ ಸಿನಿಮಾಗಳಿಗೆ ಜನಸ್ಪಂದನವನ್ನು ಗಮನಿಸಿ ಮುಂದೆ ಹೆಜ್ಜೆ ಇಡುವ ಯೋಚನೆಯಲ್ಲಿದ್ದಾರೆಯೇ ಎಂಬ ಪ್ರಶ್ನೆ ಮೂಡುವುದು ಸಹಜ.

ತೆರೆಯ ಮೇಲೆ ಶ್ರದ್ಧಾ ಕಾಣಿಸಿಕೊಳ್ಳದೆ ವರ್ಷಗಳೇ ಕಳೆದರೂ, ಸೋಷಿಯಲ್ ಮೀಡಿಯಾಗಳಲ್ಲಿಯಂತೂ ಅವರು ಸಕ್ರಿಯರಾಗಿಯೇ ಇದ್ದಾರೆ. ಆಗಾಗ ಫೋಟೊ ಶೂಟ್‌ಗಳನ್ನು ನಡೆಸಿ ಫೋಟೊ ಪೋಸ್ಟ್ ಮಾಡುತ್ತ, ತಾವು ವಿಹಾರಕ್ಕಾಗಿ ಹೋದ ಜಾಗಗಳ ಫೋಟೊಗಳನ್ನು ಹಂಚಿಕೊಳ್ಳುತ್ತ ಇದ್ದಾರೆ. ಆದರೆ ಅವರನ್ನು ಮತ್ತೆ ತೆರೆಯ ಮೇಲೆ ನೋಡಲು ಕಾಯುತ್ತಿರುವವರಿಗೆ ಮಾತ್ರ ಇನ್ನು ಎಷ್ಟು ಕಾಲ ಕಾಯಬೇಕು ಎಂಬ ಪ್ರಶ್ನೆಗೆ ಸದ್ಯಕ್ಕಂತೂ ಉತ್ತರ ದೊರಕುವಂತೆ ತೋರುತ್ತಿಲ್ಲ. ■

